ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2105
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
3. ಉತ್ತರಿಸಬೇಕಾದ ದಿನಾಂಕ : 17.03.2022
4. ಉತ್ತರಿಸುವ ಸಚಿವರು :ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಯಾವ ಯಾವ ಪ್ರದೇಶಗಳನ್ನು ಕೊಳವೆ ಬಾವಿ ಕೊರೆಯುವಿಕೆಯನ್ನು ನಿಷೇಧಿಸಿದ ಪ್ರದೇಶಗಳೆಂದು ಗುರುತಿಸಲಾಗಿದೆ; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)	ಕರ್ನಾಟಕ ಅಂತರ್ಜಲ ಪ್ರಾಧಿಕಾರದಿಂದ ಯಾವುದೇ ಪ್ರದೇಶಗಳಲ್ಲಿ ಕೊಳವೆಬಾವಿ ಕೊರೆಯುವಿಕೆಯನ್ನು ನಿಷೇಧಿಸಿರುವುದಿಲ್ಲ. ಆದರೆ, ರಾಜ್ಯದಲ್ಲಿನ 45 ಅತಿಬಳಕೆ ತಾಲ್ಲೂಕುಗಳಲ್ಲಿ ಕೊಳವೆಬಾವಿಗಳನ್ನು ಕೊರೆಯಲು ಆಯಾ ಜಿಲ್ಲೆಗಳಲ್ಲಿನ ಜಿಲ್ಲಾ ಅಂತರ್ಜಲ ಸಮಿತಿಯಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಜಿಲ್ಲಾವಾರು ಅತಿಬಳಕೆ ತಾಲ್ಲೂಕುಗಳ ಅಧಿಸೂಚನೆ ಪ್ರತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ	ರಾಜ್ಯದಲ್ಲಿ ಕೊಳವೆ ಬಾವಿ ಕೊರೆಯುವ ಯಂತ್ರವನ್ನು ನೋಂದಾಯಿಸುವ ಸಕ್ಷಮ ಪ್ರಾಧಿಕಾರ ಯಾವುದು; ರಾಜ್ಯದಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ ಕೊಳವೆ ಬಾವಿ ಕೊರೆಯುವ ಯಂತ್ರಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)	ಕರ್ನಾಟಕ ಅಂತರ್ಜಲ ಪ್ರಾಧಿಕಾರವು ಕೊಳವೆ ಬಾವಿ ಕೊರೆಯುವ ಯಂತ್ರವನ್ನು ನೋಂದಾಯಿಸುವ ಸಕ್ಷಮ ಪ್ರಾಧಿಕಾರವಾಗಿದೆ. ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಿದ ಚಾಲ್ತಿಯಲ್ಲಿರುವ ಜಿಲ್ಲಾವಾರು ಕೊಳವೆಬಾವಿ ಕೊರೆಯುವ ಯಂತ್ರಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
ಇ	ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರೆಯಲಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು; ಅವುಗಳ ಕಾರ್ಯನಿರ್ವಹಿಸುತ್ತಿರುವ ಮತ್ತು ನೀರು ಇಲ್ಲದಿರುವ ಕೊಳವೆಬಾವಿಗಳ ಸಂಖ್ಯೆ ಎಷ್ಟು; ಉಪಯೋಗಿಸದಿರುವ ಕೊಳವೆಬಾವಿಗಳಿಂದ ಅವಘಡವನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	2013-14ನೇ ಸಾಲಿನಲ್ಲಿ ನಡೆದ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ಕೈಗೊಂಡ 5ನೇ ಸಣ್ಣ ನೀರಾವರಿ ಗಣತಿಯಂತೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 48186 ಸಂಖ್ಯೆ ಬಾವಿ ಮತ್ತು ಕೊಳವೆಬಾವಿಗಳು ಇರುತ್ತವೆ. 6ನೇ ಸಣ್ಣ ನೀರಾವರಿ ಗಣತಿಯು ಜಾರಿಯಲ್ಲಿರುತ್ತದೆ. ತೆರೆದ / ತ್ಯಕ್ತ ಕೊಳವೆಬಾವಿಗಳಿಂದ ಆಗುವ ಅವಘಡಗಳನ್ನು ತಪ್ಪಿಸಲು ಘನ ಉಚ್ಚ ನ್ಯಾಯಾಲಯದ ಆದೇಶದಂತೆ ವಿಫಲ ಕೊಳವೆಬಾವಿಗಳನ್ನು ಸುರಕ್ಷಿತವಾಗಿ ಮುಚ್ಚಲಾಗುತ್ತಿದೆ.
ಈ	ಕೊಳವೆ ಬಾವಿಗಳನ್ನು ಪುನ:ಶ್ಚೇತನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಕೊಳವೆ ಬಾವಿಗಳನ್ನು ಪುನಶ್ಚೇತನಗೊಳಿಸಲು ಹಾಗೂ ಅಂತರ್ಜಲ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಕಿಂಡಿ ಅಣೆಕಟ್ಟುಗಳನ್ನು ಪಶ್ಚಿಮವಾಹಿನಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಿಂದಾಗಿ ಅಂತರ್ಜಲ ಅಭಿವೃದ್ಧಿಯಾಗಲು ಸಹಕಾರಿಯಾಗುತ್ತದೆ.

ಕಡತ ಸಂಖ್ಯೆ:MID 53 LCQ 2022

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

ಅನುಬಂಧ-1

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಸಂಖ್ಯೆ: ಸನೀಇ 09 ಅಜಅ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, 2ನೇ ಮಹಡಿ,
ಬೆಂಗಳೂರು, ದಿನಾಂಕ: 05.05.2020.

ಅಧಿಸೂಚನೆ

ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿಪಡಿಸುವ ಮತ್ತು ಅಂತರ್ಜಲ ಅತಿ ಬಳಕೆ ನಿಯಂತ್ರಣ ಮಾಡುವ ಸಲುವಾಗಿ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011 (2011ರ ಕರ್ನಾಟಕ ಅಂತರ್ಜಲ ಅಧಿನಿಯಮ ಸಂಖ್ಯೆ 25)ನ್ನು ದಿನಾಂಕ: 20-06-2011 ರಿಂದ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಜಾರಿಗೆ ತರಲಾಗಿದೆ. ಸದರಿ ಅಧಿನಿಯಮ 3(1) ರನ್ವಯ ದಿನಾಂಕ: 16-03-2012 ರಂದು ಕರ್ನಾಟಕ ಅಂತರ್ಜಲ ಪ್ರಾಧಿಕಾರ ರಚಿಸಲಾಗಿದೆ.

ಮಾರ್ಚ್ 2017ರ ಅಂತ್ಯದ ಅಂತರ್ಜಲ ಮೌಲೀಕರಣ ವರದಿಯು ಕೇಂದ್ರ ಸರ್ಕಾರದ Ground Water Estimation Commiteeಯಿಂದ ಅನುಮೋದನೆಗೊಂಡಿದ್ದು, ಅದರಂತೆ ರಾಜ್ಯದ 45 ತಾಲ್ಲೂಕುಗಳನ್ನು ಅಂತರ್ಜಲ ಅತಿ ಬಳಕೆ ಎಂದು ವರ್ಗೀಕರಿಸಲಾಗಿದೆ. ರಾಜ್ಯದಲ್ಲಿ ಅಂತರ್ಜಲ ಅತಿ ಬಳಕೆ ಮತ್ತು ಜಲಮಟ್ಟ ಕುಸಿತವನ್ನು ತಡೆಯಲು ಜಾರಿಗೊಳಸಲಾದ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011 ಮತ್ತು ನಿಯಮಾವಳ 2012ನ್ನು ಅನುಷ್ಠಾನಗೊಳಸಬೇಕಾಗಿರುತ್ತದೆ. ಸದರಿ ಅಧಿನಿಯಮದ ಪ್ರಕರಣ 10(3) ರಡಿ ಪ್ರದತ್ತವಾದ ಅಧಿಕಾರದನ್ವಯ ಮತ್ತು ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011ರಡಿ ರಚಿಸಲಾದ ಕರ್ನಾಟಕ ಅಂತರ್ಜಲ ಪ್ರಾಧಿಕಾರ ಸಭೆ ದಿ:12.11.2019ರಲ್ಲಿ ತೀರ್ಮಾನಿಸಿದಂತೆ ಅಂತರ್ಜಲ ಅತಿ ಬಳಕೆ ತಾಲ್ಲೂಕುಗಳೆಂದು ಗುರುತಿಸಿರುವ ಈ ಕೆಳಕಂಡ 45 ತಾಲ್ಲೂಕುಗಳಲ್ಲಿ ಅಂತರ್ಜಲ ಅಧಿನಿಯಮವನ್ನು ಅನುಷ್ಠಾನಗೊಳಸಲು ನಿರ್ಣಯಿಸಿ, ದಿ:05.08.2020ರಿಂದ ಜಾರಿಗೆ ಬರುವಂತೆ ಅಧಿಸೂಚಿಸಲಾಗಿದೆ.

ಕ್ರ.ಸಂ.	ತಾಲ್ಲೂಕು	ಜಿಲ್ಲೆ
1.	ಬಾದಾಮಿ	ಬಾಗಲಕೋಟೆ
2.	ಬಾಗಲಕೋಟೆ	
3.	ದೇವನಹಳ್ಳಿ	ಬೆಂಗಳೂರು ಗ್ರಾಮಾಂತರ
4.	ದೊಡ್ಡ ಬಳ್ಳಾಪುರ	
5.	ಹೊಸಕೋಟೆ	
6.	ನೆಲಮಂಗಲ	
7.	ಆನೇಕಲ್	ಬೆಂಗಳೂರು ನಗರ
8.	ಬೆಂಗಳೂರು ಪೂರ್ವ	
9.	ಬೆಂಗಳೂರು ಉತ್ತರ	
10.	ಬೆಂಗಳೂರು ದಕ್ಷಿಣ	
11.	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ
12.	ಚಿಂತಾಮಣಿ	
13.	ಗೌರಿಬಿದನೂರು	
14.	ಗುಡಿಬಂಡೆ	
15.	ಶಿಡ್ಲಘಟ್ಟ	
16.	ಬಾಗೇಪಲ್ಲಿ	

ಸರ್ಕಾರದ ಅಧೀನ ಕಾರ್ಯದರ್ಶಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ

....2

17.	ಅಥಣಿ	ಬೆಳಗಾವಿ
18.	ರಾಮದುರ್ಗ	
19.	ಸವದತ್ತಿ	
20.	ಹಗರಿ ಬೊಮ್ಮನಹಳ್ಳಿ	ಬಳ್ಳಾರಿ
21.	ಹರಪ್ಪನಹಳ್ಳಿ	
22.	ಗುಂಡ್ಲುಪೇಟೆ	ಚಾಮರಾಜನಗರ
23.	ಕಡೂರು	ಚಿಕ್ಕಮಗಳೂರು
24.	ಚಿತ್ರದುರ್ಗ	ಚಿತ್ರದುರ್ಗ
25.	ಹೊಳಲ್ಕೆರೆ	
26.	ಹಿರಿಯೂರು	
27.	ಹೊಸದುರ್ಗ	
28.	ಚಳ್ಳಕೆರೆ	
29.	ಜಗಳೂರು	ದಾವಣಗೆರೆ
30.	ಚನ್ನಗಿರಿ	
31.	ರೋಣ	ಗದಗ
32.	ಗದಗ	
33.	ಅರಸೀಕೆರೆ	ಹಾಸನ
34.	ಬಂಗಾರಪೇಟೆ	ಕೋಲಾರ
35.	ಕೋಲಾರ	
36.	ಮಾಲೂರು	
37.	ಮುಳಬಾಗಿಲು	
38.	ಶ್ರೀನಿವಾಸಪುರ	
39.	ರಾಮನಗರ	ರಾಮನಗರ
40.	ಕನಕಪುರ	
41.	ಚಿಕ್ಕನಾಯ್ಕನಹಳ್ಳಿ	ತುಮಕೂರು
42.	ಕೊರಟಗೆರೆ	
43.	ಮಧುಗಿರಿ	
44.	ತಿಪಟೂರು	
45.	ತುಮಕೂರು	

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎಸ್ ಜ್ಯೋತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

<u>ಸಂಕಲನಕಾರರು:</u>

ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು -- ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಅದರ 200 ಪ್ರತಿಗಳನ್ನು ಸಣ್ಣ ನೀರಾವರಿ ಇಲಾಖೆಗೆ ಒದಗಿಸುವಂತೆ ಕೋರಿದೆ.

<u>ಇವರಿಗೆ:</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.

ಅನುಬಂಧ - 2

ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಿ ಚಾಲ್ತಿಯಲ್ಲಿರುವ
ಕೊರೆಯುವ ರಿಗ್ ಯಂತ್ರಗಳ ಜಿಲ್ಲಾವಾರು ವಿವರ

Sl. No.	District	No of 7A List
1	Bagalkote	22
2	Bengaluru Urban	102
3	Bengaluru Rural	11
4	Bidar	4
5	Bellary	12
6	Belagavi	28
7	Chikkaballapura	14
8	Chikkamagaluru	10
9	Chitradurga	27
10	Chamarajanagara	15
11	Davanagere	7
12	Dharwad	14
13	Gadag	4
14	Hassan	12
15	Haveri	8
16	Kolar	29
17	Koppal	20
18	Kalburgi	14
19	Kodagu	1
20	Mandya	13
21	Mysore	9
22	Mangalore	34
23	Ramangara	3
24	Raichuru	14
25	Shivamogga	19
26	Tumkuru	14
27	Udupi	5
28	Vijayapura	11
29	Yadagiri	5
30	Karwar	2
	Total	483